**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂ: ಡಿಸಿಇ:ಟಿಆರ್‌ಎನ್:ಪಿಪಿಎಸ್:03:ಟಿಡಿಜಿ-2023 ಕಾಲೇಜು & ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. ದಿನಾಂಕ:24.07.2023

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅಗತ್ಯ ಕಾರ್ಯಭಾರವಿಲ್ಲದ ಬೋಧಕರನ್ನು ಕಾರ್ಯಭಾರವಿರುವ ಕಾಲೇಜುಗಳಿಗೆ ಹುದ್ದೆಸಹಿತ ಸ್ಥಳಾಂತರಿಸುವ ಸಂಬಂಧ ಅಂತಿಮ ಪಟ್ಟಿಯನ್ನು ಪ್ರಕಟಿಸಿ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸುತ್ತೋಲೆ ದಿನಾಂಕ:10.07.2023 ಹಾಗೂ 18.07.2023.

** ** **

ಕಾಲೇಜು ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಗತ್ಯ ಕಾರ್ಯಭಾರವಿಲ್ಲದಿರುವ ಬೋಧಕರ ಹುದ್ದೆಗಳನ್ನು ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಕಾಲೇಜುಗಳಿಗೆ ಸ್ಥಳಾಂತರಿಸಲು ಉದ್ದೇಶಿಸಿ, EMIS ತಂತ್ರಾಂಶದಲ್ಲಿ ದಾಖಲಿಸಿದ್ದ ಕಾರ್ಯಭಾರಗಳನ್ನು ಪರಿಗಣಿಸಿ ಸ್ಥಳಾಂತರಿಸಬೇಕಾದ ಬೋಧಕರ ಹುದ್ದೆಗಳ ಪಟ್ಟಿಯನ್ನು ತಯಾರಿಸಿ ಉಲ್ಲೇಖಿತ ಸುತ್ತೋಲೆಯನ್ವಯ ಪ್ರಕಟಿಸಲಾಗಿತ್ತು. ಹಾಗೂ ಸದರಿ ಪಟ್ಟಿಗೆ ಸಂಬಂಧಿಸಿದಂತೆ ಕಾರ್ಯಭಾರದಲ್ಲಿ ಮತ್ತು ಬೋಧಕರ ಸೇವಾ ವಿವರಗಳಲ್ಲಿ ವ್ಯತ್ಯಾಸಗಳಿದ್ದಲ್ಲಿ ದಿನಾಂಕ:19-07-2023 ರ ಒಳಗಾಗಿ dce.teachingpostshifting@gmail.com ವಿಳಾಸಕ್ಕೆ ಅಗತ್ಯ ಮಾಹಿತಿಗಳೊಂದಿಗೆ ಇ-ಮೇಲ್ ಮೂಲಕ ಸಲ್ಲಿಸುವಂತೆ ಸೂಚಿಸಲಾಗಿತ್ತು.

ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸ್ವೀಕೃತವಾದ ಮನವಿ/ ಮಾಹಿತಿಗನುಗುಣವಾಗಿ ಸ್ಥಳಾಂತರಗೊಳಿಸಬೇಕಾದ ಬೋಧಕರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ ಈ ಸುತ್ತೋಲೆಗೆ ಲಗತ್ತಿಸಲಾಗಿದೆ.

- ಕಾರ್ಯಭಾರವಿಲ್ಲದ ಬೋಧಕರುಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ (ಲೀನ್) ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಪರಿಗಣಿಸಿ ಸದರಿ ಕಾಲೇಜಿನಲ್ಲಿನ ಸೇವಾಹಿರಿತನದ ಆಧಾರದಲ್ಲಿ ವಿಷಯವಾರು ಆದ್ಯತಾ ಪಟ್ಟಿಯನ್ನು ತಯಾರಿಸಲಾಗಿದೆ.

- **ವರ್ಗಾವಣೆ ನಿಯಮ 03 ರಲ್ಲಿ ತಿಳಿಸಿರುವಂತೆ ಹುದ್ದೆ ಸ್ಥಳಾಂತರವನ್ನು ಕಾರ್ಯಭಾರವಿರುವ ಅದೇ ವಲಯದ ಕಾಲೇಜಿಗೆ ಮಾಡಬೇಕಿರುತ್ತದೆ. ಅದೇ ವಲಯದ ಕಾಲೇಜಿನಲ್ಲಿ ಕಾರ್ಯಭಾರವಿಲ್ಲದಿದ್ದ ಪಕ್ಷದಲ್ಲಿ ಮಾತ್ರ ಸಮೀಪದ ಅನ್ಯ ವಲಯದ ಕಾರ್ಯಭಾರವಿರುವ ಕಾಲೇಜಿಗೆ ಸ್ಥಳಾಂತರಿಸಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.**

- **ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ ಹಾಗೂ ಉಳಿಕೆ ರಾಜ್ಯವೃಂದಕ್ಕೆ ಒಳಪಡುವ ಬೋಧಕರು ಆಯಾ ಪ್ರದೇಶದ ಕಾಲೇಜುಗಳನ್ನೇ ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ.**

ಸ್ಥಳಾಂತರ ಪ್ರಕ್ರಿಯೆಯ **Online Counselling** ನ ವೇಳಾಪಟ್ಟಿ ಕೆಳಕಂಡಂತಿದೆ.

| **ಕ್ರ.ಸಂ.** | **Online Counselling ದಿನಾಂಕ** | **ವಿಷಯ** | **ಸಮಯ** |
|---|---|---|---|
| 01 | 25.07.2023 | ವಾಣಿಜ್ಯಶಾಸ್ತ್ರ | 03.00 P.M. – 04.00 P.M.<br>ಗೂಗಲ್ ಮೀಟ್ ಲಿಂಕ್ **https://meet.google.com/gea-gkxk-psi** |
| 02 | | ಗಣಕವಿಜ್ಞಾನ | |
| 03 | | ಅರ್ಥಶಾಸ್ತ್ರ | |
| 04 | | ಎಲೆಕ್ಟ್ರಾನಿಕ್ಸ್ | |
| 05 | | ಇಂಗ್ಲೀಷ್ | |
| 06 | | ಹಿಂದಿ | |
| 07 | | ಕನ್ನಡ | |
| 08 | | ರಾಜ್ಯಶಾಸ್ತ್ರ | |
| 09 | | ನಿರ್ವಹಣಾಶಾಸ್ತ್ರ | |
| 10 | | ಗೃಹವಿಜ್ಞಾನ | |

ಸಂಬಂಧಿಸಿದ ಬೋಧಕರುಗಳು ಇಲಾಖೆಯ ವೆಬ್‌ಸೈಟ್‌ನ ಬೋಧಕರ ವರ್ಗಾವಣೆ-2023ರ ವೆಬ್‌ಪೇಜ್‌ನಲ್ಲಿ ಒದಗಿಸಲಾಗುವ/ಮೇಲೆ ತಿಳಿಸಿರುವ **google meet link** ಮೂಲಕ ನಿಗದಿಪಡಿಸಿರುವ ವೇಳೆಯಲ್ಲಿ **Online Counselling** ನಲ್ಲಿ ಭಾಗವಹಿಸುವುದು. ಹೆಚ್ಚುವರಿ ಕಾರ್ಯಭಾರವಿರುವ ವಿಷಯವಾರು ಮತ್ತು ವಲಯವಾರು ಕಾಲೇಜುಗಳ ವಿವರಗಳನ್ನು ಸುತ್ತೋಲೆಗೆ ಲಗತ್ತಿಸಿದ್ದು ಕೌನ್ಸಿಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದು. ಸಂಬಂದಪಟ್ಟ ಬೋಧಕರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಲಯದ ಕಾಲೇಜನ್ನೇ ಆಯ್ಕೆ ಮಾಡಿಕೊಳ್ಳುವುದು.

ಈ ಸುತ್ತೋಲೆಗೆ ಲಗತ್ತಿಸಿರುವ ಜೇಷ್ಠತಾಪಟ್ಟಿಯ ಆದ್ಯತೆಯನುಸಾರ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು. ಸಂಬಂಧಿಸಿದ ಬೋಧಕರು ಕಡ್ಡಾಯವಾಗಿ **Online Counselling** ನಲ್ಲಿ ಭಾಗವಹಿಸಿ, ಪ್ರದರ್ಶಿಸಲಾಗುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿದೆ. **Online Counselling** ಗೆ ಗೈರುಹಾಜರಾಗುವ ಬೋಧಕರನ್ನು ನೇರವಾಗಿ ಈ ಕಛೇರಿ ಹಂತದಲ್ಲಿಯೇ ಹುದ್ದೆಸಹಿತ ಸ್ಥಳನಿಯುಕ್ತಿಗೊಳಿಸಲಾಗುವುದು ಎಂದು ತಿಳಿಸಲಾಗಿದೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**

**ಇವರಿಗೆ**

1. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಸ್ಥಳಾಂತರ ಪಟ್ಟಿಯಲ್ಲಿನ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ - ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.

**ಪ್ರತಿಯನ್ನು**

1. ಡಾ. ರಮೇಶರೆಡ್ಡಿ, ಎನ್. ಗಣಕ ವಿಜ್ಞಾನ ಸಹ ಪ್ರಾಧ್ಯಾಪಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ನಿಗದಿತ ದಿನಾಂಕದಂದು Online Counselling ನಡೆಸಲು ಅಗತ್ಯಕ್ರಮವಹಿಸುವುದು.
2. ಮಾಹಿತಿ ತಂತ್ರಜ್ಞಾನ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು- ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ.

**ಸುತ್ತೋಲೆ ಸಂಖ್ಯೆ:ಡಿಸಿಇ/ಟಿಆರ್‌ಎನ್/ಪಿಪಿಎಸ್/03/ಟಿಡಿಜಿ/2023. ದಿನಾಂಕ: 24.07.2023 ರ ಅನುಬಂಧ**

| Sl No. | Zone | College Name | Course Name | Faculty Name | Date from which working in the present college |
|---|---|---|---|---|---|
| 1 | E | GOVT. FIRST GRADE COLLEGE, SHANKARNARAYAN | Business Management | DR YATHIRAJU K | 04-09-2017 |
| 2 | C | GOVT. BOYS COLLEGE, KOLAR - 563 101. | Commerce | DR. LAKSHMI V | 01-10-2009 |
| 3 | B | GOVT. FIRST GRADE COLLEGE, KAVUR - 575 015. (MANGALORE) | Commerce | LOUIS MANOJ AMBROSE | 01-09-2015 |
| 4 | B | GOVT. FIRST GRADE COLLEGE, KAVUR - 575 015. (MANGALORE) | Commerce | MOHINI | 01-09-2015 |
| 5 | D | SMT. & SRI.Y.E.RANGAIAH SHETTY, GOVT. FIRST GRADE COLLEGE, PAVAGADA - 561 202. | Commerce | LOHITHRAM S K | 26-08-2017 |
| 6 | D | GOVT. FIRST GRADE COLLEGE, MUDGAL | Computer Science | NAVEEN D. CHANDAVARKAR | 09-09-2017 |
| 7 | D | SMT. & SRI.Y.E.RANGAIAH SHETTY, GOVT. FIRST GRADE COLLEGE, PAVAGADA - 561 202. | Computer Science | Varna.C.V | 03.01.2018 |
| 8 | E | SMT. RUKMINI SHEDTHI MEMORIAL NATIONAL GOVT. FIRST GRADE COLLEGE,BARKUR - 576 210 | Economics | PADMANABHA SHETTY | 31-08-2017 |
| 9 | B | GOVT. COLLEGE, SEDAM ROAD, GULBARGA - 585 105. | Electronics | DR. NAGRAJ KISHANRAO | 12-11-2008 |
| 10 | D | GOVT. LAW COLLEGE, HOLENARASIPURA | English | H.P. RAGHAVENDRACHARI | 26-08-2017 |
| 11 | D | GOVT. FIRST GRADE COLLEGE, CHITTAPURA | Hindi | SAVITRI MAHADEVRAO DESAI | 31-08-2017 |
| 12 | D | Smt. & Sri.Y.E.Rangaiah Shetty, Govt. First Grade College, Pavagada - 561 202. | Kannada | ASHWATHA S | 26-08-2017 |
| 13 | D | GOVT. FIRST GRADE COLLEGE, NAREGAL | Kannada | MEENAKSHI K H | 29-08-2017 |
| 14 | C | GOVT. BOYS COLLEGE, KOLAR - 563 101. | Political Science | DR.SHANKARAPPA.R | 05-09-2009 |
| 15 | D | GOVT. WOMENS COLLEGE, BYLAHONGALA | Home Science | Dr.Rajeshwari.J | 04.05.2022 |

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ